

**ಕೆ. ಫಣಿರಾಜ್**
ಕಲೆ: ಮದನ್ ಸಿ.ಪಿ.

# ಕಳೆದ ಹತ್ಯಾರುಗಳ ಪ್ರಲಾಪವೂ



## ಮರ್ತ್ಯಲೋಕ

ಕೊಲೆಯ ಆರೋಪಿ ಸಿಕ್ಕರೂ ಹತ್ಯಾರ
ಸಿಕ್ಕಿಲ್ಲ ಎಂಬ ಕಿರಿಕಿರಿಯಲ್ಲಿ
ಇದ್ದ ತನಿಖಾ ಅಧಿಕಾರಿಗೆ
ಮನೆಯಿಂದ ಫೋನು
'ಅಡುಗೆ ಮನೆ ಕತ್ತಿ ಅಡಕಲು
ಕೋಣೆಯಲ್ಲಿತ್ತು ಕಣ್ರೀ!'

ಕ್ಯಾನ್ವಾಸ್ ಕೊರೆಯುವ
ಬ್ಲೇಡ್ ಹುಡುಕಿ ಹುಡುಕಿ
ಸುಸ್ತಾದ ಚಿತ್ರಕಾರ ಪೇಪರಲ್ಲಿ
ಓದುವನು ಸುದ್ದಿ: 'ಕ್ಯಾನ್ವಾಸ್ ಕಟ್ಟರ್
ಬಳಸಿ ಯುವತಿಯ ಮೇಲೆ ಹಲ್ಲೆ'

ಕತ್ತು ಬಿಗಿದುಕೊಂಡು ಆತ್ಮ
ಹತ್ಯೆಗೆ ಯತ್ನಿಸಿದ ಹೆಂಡತಿ–
ಗೆ ಗಂಡ ಕೇಳುವನು– ಮನೆಯಲ್ಲಿ
ಅಷ್ಟೂ ಚೂರಿ ಇದ್ದವಲ್ಲಾ ಮಾರಾಯ್ತಿ!